**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 5042/2022**

**ಸಾಕ್ಷಿಗೆ ದಿನಾಂಕ 15.06.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವರಾಜು | ಪಿ.ಡಬ್ಲ್ಯೂ–1 |
| ತಂದೆಯ/ಗಂಡನ ಹೆಸರು | : | ವೆಂಕಟೇಗೌಡ | ಸಿ.ಡಬ್ಲ್ಯೂ– 1 |
| ವಯಸ್ಸು | : | 52 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಬೆಟ್ಟದಬೀಡು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ 2 ರಿಂದ 4 ರವರ ಪರಿಚಯ ಇರುತ್ತದೆ. ನಮಗೂ ಮತ್ತು ಆರೋಪಿತರಿಗೂ ಬೆಟ್ಟದ ಬೀಡು ಗ್ರಾಮದ ಸ. ನಂ.72 ಕ್ಕೆ ಜಮೀನಿಗೆ ಸಂಬಂಧಿಸಿದಂತೆ ತಕರಾರು ಇರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ದಾಖಲಾಗಿ ಹೆಚ್ ಡಿ ಕೋಟೆ ನ್ಯಾಯಾಲಯದಲ್ಲಿ ದಾವೆಯು ವಿಚಾರಣೆಗೆ ಬಾಕಿ ಇರುತ್ತದೆ. ದಿಃ 30.03.2022 ರಂದು ಸುಮಾರು 5 ಗಂಟೆಯ ಸಮಯದಲ್ಲಿ ಹೆಚ್ ಡಿ ಕೋಟೆ ಟೌನ್ ಪುರಸಭೆಯ ಮುಂಭಾಗದಲ್ಲಿ ನಾನು ಹೋಗುತ್ತಿದ್ದಾಗ ನನಗೆ ಬೆಂಕಿ ಹಾಕುವುದಾಗಿ ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ಆದುದ್ದರಿಂದ ನಾನು ಹೆಚ್ ಡಿ ಕೋಟೆ ಪೋಲೀಸ್ ಠಾಣೆಗೆ ಆರೋಪಿತರ ವಿರುದ್ದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ

1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ಅನ್ವಯ ಮಾರನೇ ದಿನ ಪೋಲೀಸರು ಘಟನೆ ನಡೆದ ಸ್ಥಳಕ್ಕೆ ಬಂದು ನನ್ನನ್ನು ವಿಚಾರಿಸಿ ಬರೆದುಕೊಂಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿದ್ದ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯು ಕೃತ್ಯ ನಡೆದ ಸ್ಥಳದ ಮಹಜರ್ ಆಗಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಮಹಜರನ್ನು 10.30 ಗಂಟೆಯ ಸಮಯದಲ್ಲಿ ಜರುಗಿಸಲಾಯಿತು. ಸದರಿ ವಿಚಾರವಾಗಿ ನಾನು ಪೋಲೀಸರು ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.
(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಪುರಸಬೆಯ ಕಛೇರಿಯ ಮುಂದೆ ನಡೆದುಕೊಂಡು ಹೋಗುವಾಗ ಆರೋಪಿ ತರು ಎಲ್ಲಾರು ನನ್ನನ್ನು ಅಡ್ಡಗಟ್ಟಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಮಹಜರ್ ಜರುಗಿಸುವ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ 2 ಮತ್ತು 4 ರವರು ಹಾಜರು ಇದ್ದರು ಎಂದರೆ ಸಾಕ್ಷಿಯು ಅವರು ಠಾಣೆಗೆ ಬಂದು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಗಲಾಟೆಯ ಸಮಯದಲ್ಲಿ ಚಾಸಾ 2 ಮತ್ತು 3 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಆರ್ ಎಸ್ ವಕೀಲರಿಂದಃ**

1. ನಾನು ಬಿ ಎ ಪದವಿ ಯ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಿಪಿ 1 ರಂತೆ ದೂರನ್ನು ನಾನೇ ಬರೆದಿರುತ್ತೇನೆ. ಚಾಸಾ 2 ರಿಂದ 4 ರವರು ನನಗೆ ಪರಿಚಯಸ್ಥರು ಎಂದರೆ ಸರಿ. ನನ್ನ ಮತ್ತು 1 ನೇ ಆರೋಪಿಯವರ ಮದ್ಯೆ ಸಿವಿಲ್ ದಾವೆ ದಾಖಲಾಗಿ

ವಿಚಾರಣೆ ಬಾಕಿ ಇರುತ್ತದೆ ಎಂದರೆ ಸರಿ. ಆರೋಪಿ 1 ರವರ ಹೆಸರಿನಲ್ಲಿ ಬೆಟ್ಟದ ಬೀಡು ಗ್ರಾಮದ ಸ. ನಂ 72 ರಲ್ಲಿ 2 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅದೇ ರೀತಿ ಸ. ನಂ 72 ರಲ್ಲಿ 2 ಎಕರೆ ಜಮೀನು ಮಂಜೂರು ಮಾಡುವಂತೆ ಎ ಸಿ ನ್ಯಾಯಾಲಯದಿಂದ ಆದೇಶವಾಗಿರುತ್ತದ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ 1 ರವರು ತಮ್ಮ ಜಮೀನಿನಲ್ಲಿ ಮಾವಿನ ಸಸಿಗಳನ್ನು ನೆಟ್ಟು ತೋಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನೇ ನೆಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗಳು ಇರುವ ಜಮೀನಿಗೆ ಹೋಗಿ ತೊಂದರೆ ಕೊಡುತ್ತಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿಯ ನಮ್ಮ ಜಮೀನಿಗೆ ಬಂದು ತೊಂದರೆ ಕೊಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 19.02.2020 ರಲ್ಲಿ ಸ. ನಂ 72 ರ ಆರೋಪಿ 1 ರವರ ಜಮೀನಿಗೆ ನನ್ನ ಅಣ್ಣನ ಮಗ ಅಬಿಷೇಕ್ ರವರು ಆರೋಪಿ 1 ರವರು ಬೆಳೆದ ಬೆಳೆಯನ್ನು ತಿನ್ನುವಂತೆ ಹಸುಗಳನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಅಬಿಷೇಕ್ ರವರು ನನ್ನನ್ನು ಕರೆ ಮಾಡಿ ಕೆರೆಸಿ ನಂತರ ನಾನು ಅಬೀಷೆಕ್ ರವರು 2 ನೇ ಆರೋಪಿ ಮತ್ತು ಅವರ ಹೆಂಡತಿಗೆ ಹಲ್ಲೆ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಸ್ಥಳಕ್ಕೆ ಹೋಗಿ ಬುದ್ದಿವಾದ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಗಲಾಟೆ ಮಾಡಿದ್ದೇವೆ ಎಂದು ನಮ್ಮ ಮೇಲೆ ದೂರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿತರು ನಮ್ಮ ಮೇಲೆ ದೂರು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.ಅದೇ ರೀತಿ ದಿಃ 30.03.2022 ರಂದು ಸ್ವಾಮೀಗೌಡ, ಶಿವರಾಜು, ಚೇತನ ರವರು ಸೇರಿ 1 ಆರೋಪಿ ಯ ಹೆಂಡತಿ ಮೇಲೆ ಹಲ್ಲೆ ಮಾಡಿದ ವಿಚಾರವಾಗಿ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ತನಿಖಾ ಹಂತದಲ್ಲಿ ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 30.03.2022 ರಂದು ಉದ್ದೇಶ ಪೂರ್ವಕವಾಗಿ ಸುಳ್ಳು ದೂರನ್ನು ಆರೋಪಿ ವಿರುದ್ದ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಹೇಳಿರುವಂತೆ ಮುನ್ಸಿಪಾಲಿಟಿಯ ಮುಂದೆ ಎಂದರೆ ನ್ಯಾಯಾಲಯದ

ಮುಖ್ಯ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಜನರು ಪುಟ್ ಪಾತ್ ವ್ಯಾಪಾರಿಗಳು ಓಡಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸ್ಥಳದಿಂದ ಪೋಲೀಸ್ ಠಾಣೆ 100 ಮೀಟರ್ ದೂರ ಇರುತ್ತದೆ ಎಂದರೆ ಸರಿ. ಅದೇ ಸಮಯದಲ್ಲಿ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅ ಸಮಯದಲ್ಲಿ 10 ರಿಂದ 15 ಜನರು ಓಡಾಡುತ್ತಿದ್ದರು. ಗಲಾಟೆಯ ಸಮಯದಲ್ಲಿ ಯಾರು ಬಿಡಿಸಲು ಪ್ರಯತ್ನ ಮಾಡಿರುವುದಿಲ್ಲ. ಬಸವರಾಜೇಗೌಡ ರವರು ಜಗಳ ವನ್ನು ಬಿಡಿಸಲು ಬಂದ ಬಗ್ಗೆ ನನ್ನ ದೂರಿನಲ್ಲಿ ಬರೆದಿರುವುದಿಲ್ಲ. ಪೋಲೀಸರ ಮುಂದೆ ಹೇಳಿಕೆಯನ್ನು ಮಾರನೇ ದಿನ ನೀಡಿರುತ್ತೇನೆ. ಸಾಕ್ಷಿದಾರರು ಇದ್ದ ಬಗ್ಗೆ ನಾನು ಹೇಳಿದ್ದರಿಂದ ಕರೆಸಲಾಗಿರುತ್ತದೆ. ನನ್ನ ದೂರಿನಲ್ಲಿ ಆರೋಪಿತರು ಮಚ್ಚನ್ನು ಹಿಡಿದು ಓಡಾಡುತ್ತಿದ್ದರು ಎಂದು ಹೇಳಿರುವುದಿಲ್ಲ. ಆರೋಪಿತರು ಯಾವತ್ತು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಜೀವಬೆದರಿಕೆಯನ್ನು ಹಾಕಿರುವುದಿಲ್ಲ ಆದರೆ ನಾನೇ ಅವರ ಜಮೀನನ್ನು ಹೊಡೆದುಕೊಳ್ಳಲು ಮತ್ತು ಎದುರಿಸಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. 5 ನೇ ಆರೋಪಿಯು ಲಕ್ವ ಆಗಿರುವುರಿಂದ ಎಲ್ಲಿಯು ಓಡಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ 3, 4 ಮತ್ತು 6 ರವರು ಮೈಸೂರಿನ ವಾಸಿಗಳು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಮೈಸೂರಿನವರಾಗಿದ್ದು ಯಾವತ್ತು ಕೋಟೆಗೆ ಬಂದು ನನಗೆ ತೊಂದರೆ ನೀಡಿರುವುದಿಲ್ಲ ಆದರು ಸಹ ಉದ್ದೇಶ ಪೂರ್ವಕವಾಗಿ ತೊಂದರೆಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಬರೆಯಲು ಸಂಬಂದಪಟ್ಟ ಪೋಲೀಸರು ಅವರ ಮೇಲಿನ ಅಧಿಕಾರಿಗಳು ತಿಳಿಸಿರುತ್ತಾರೆ. ಮಹಜರಿನಲ್ಲಿ ಏನು ಬರೆದಿರುತ್ತದೆ ಎಂದು ತಿಳಿಯದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮೇಲೆ ನೀಡಿದ ದೂರಿನ ಪ್ರತಿಯಾಗಿ ಸುಳ್ಳು

ದೂರನ್ನು ನೀಡಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ